ಅ) 2000-2001ನೇ ಸಾಲಿನಲ್ಲಿ ಪಶುವೈದ್ಯ ಆಸ್ಪತ್ರೆಗಳನ್ನು ಮಂಜೂರು ಮಾಡಲಾಗಿದೆಯೇ? ಮಾಡಿದ್ದಲ್ಲಿ ರಾಜ್ಯದ ಯಾವ ಯಾವ ಭಾಗಕ್ಕೆ ಮಂಜೂರು ಮಾಡಲಾಗಿದೆ? ಸಂಪೂರ್ಣ ಮಾಹಿತಿ ಒದಗಿಸುವುದು?

ಆ) ಪಶುವೈದ್ಯ ಆಸ್ಪತ್ರೆಗಳಲ್ಲಿ ವೈದ್ಯರು ಹಾಗೂ ಸಿಬ್ಬಂದಿ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಹಾಗಿದ್ದಲ್ಲಿ ವೈದ್ಯರು ಹಾಗೂ ಸಿಬ್ಬಂದಿ ಹುದ್ದೆಗಳನ್ನು ತುಂಬಲು ಭರ್ತಿ ಮಾಡಲು ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಎ. ಕೃಷ್ಣಪ್ಪ (ಪಶು ಸಂಗೋಪನೆ ಮತ್ತು ಸಕ್ಕರೆ ಸಚಿವರು):

ಅ) ಇಲ್ಲ

ಆ) ಉದ್ಭವಿಸುವುದಿಲ್ಲ

ಇ) ಬಂದಿದೆ. ಪಶುವೈದ್ಯಾಧಿಕಾರಿಗಳನ್ನು ಹಾಗೂ ಪಶುವೈದ್ಯಕೀಯ ಸಹಾಯಕರನ್ನು ಗುತ್ತಿಗೆ ಆಧಾರದ ಮೇಲೆ ತುಂಬಲು ಸರ್ಕಾರ ಈಗಾಗಲೇ ಸಂಬಂಧಿಸಿದ ಜಿಲ್ಲಾ ಅಧಿಕಾರಿಗಳಿಗೆ ಅಧಿಕಾರ ನೀಡಿದೆ. ಪಶುವೈದ್ಯಕೀಯ ಪರೀಕ್ಷಕರನ್ನು ನೇಮಕಾತಿಯ ವಿಶೇಷ ನಿಬಂಧನೆಗಳಡಿಯಲ್ಲಿ ತುಂಬಲು ಕ್ರಮ ಕೈಗೊಳ್ಳಲಾಗುತ್ತಿದೆ.

ಧಾರವಾಡ ಹಾಲು ಒಕ್ಕೂಟದಲ್ಲಿ ಹಾಲು ಉತ್ಪಾದನೆ

1060 (1088) ಶ್ರೀ ಹೊನ್ನಳ್ಳಿ ಜಬ್ಬಾರ್ ಖಾನ್ ಹೈಯತ್ ಖಾನ್ : ಮಾನ್ಯ ಪಶುಸಂಗೋಪನೆ ಮತ್ತು ಸಕ್ಕರೆ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಧಾರವಾಡ ಹಾಲು ಒಕ್ಕೂಟದಲ್ಲಿ ಪ್ರತಿದಿನ ಎಷ್ಟು ಲೀಟರ್ ಹಾಲು ಹಾಗೂ ಹಾಲಿನ ಉತ್ಪಾದನೆ ಉತ್ಪಾದಿಸಲಾಗುತ್ತಿದೆ.

ಆ) ಧಾರವಾಡ ಹಾಲು ಒಕ್ಕೂಟದಲ್ಲಿ ಉತ್ಪಾದಿಸಲಾಗುತ್ತಿರುವ ಪ್ರತಿದಿನ ಹಾಲು ಹಾಗೂ ಹಾಲಿನ ಉತ್ಪಾದನೆಗಾಗಿ ಎಷ್ಟು ಹಣ ಖರ್ಚು ಮಾಡಲಾಗುತ್ತಿದೆ.

ಇ) ಧಾರವಾಡ ಹಾಲು ಒಕ್ಕೂಟವು ಹಾನಿಯಲ್ಲಿದೆ ಎಂಬ ವಿಷಯ ತಮ್ಮ ಗಮನಕ್ಕೆ ಬಂದಿದೆಯೇ?

ಈ) ಒಟ್ಟು ಹಾನಿಯಾದ ಹಣವೆಷ್ಟು? ಹಾನಿಯಾದ ಹಣದಲ್ಲಿ ಮರು ಪಾವತಿಯಾದ ಹಣವೆಷ್ಟು?

ಶ್ರೀ ಎ. ಕೃಷ್ಣಪ್ಪ (ಪಶುಸಂಗೋಪನೆ ಮತ್ತು ಸಕ್ಕರೆ ಸಚಿವರು) :

ಅ) ಹಾಲಿನ ಪ್ರತಿದಿನ ಧಾರವಾಡ ಹಾಲು ಒಕ್ಕೂಟವು 57,802 ಲೀಟರ್ ಪಾಲನ್ನು ಶೇಖರಿಸುತ್ತಿದೆ. ಹಾಲಿ ಸರಾಸರಿ ದಿನವಹಿ ಉತ್ಪಾದಿಸುವ ಉತ್ಪನ್ನಗಳ ವಿವರ ಈ ಕೆಳಕಂಡಂತಿದೆ:

ಬೆಣ್ಣೆ	2.00 ಮೆಟ್ರಿಕ್ ಟನ್ (ಸಗಟು ಸೇರಿ)
ತುಪ್ಪ	1.00 ಮೆಟ್ರಿಕ್ ಟನ್
ಪೇಡಾ	70 ಕೆ.ಜಿ
ಪನ್ನೀರ್	60 ಕೆ.ಜಿ
ಲಸ್ಸಿ	500 ಲೀಟರ್
ಮೊಸರು	1500 ಲೀಟರ್

ಸಮೃದ್ಧಿ ಕಾಲದಲ್ಲಿ ಪ್ರತಿದಿನ 10 ಮೆಟ್ರಿಕ್ ಟನ್ ಕೆನೆ ರಹಿತ ಹಾಲಿನ ಪುಡಿಯನ್ನು ತಯಾರಿಸಲಾಗುತ್ತದೆ

ಅ) ಪ್ರತಿದಿನ ರೂ. 1,93,636-70 ಗಳನ್ನು ಹಾಲು ಶೇಖರಣೆ, ಶೀತಲೀಕರಣ ಸಂಸ್ಕರಣೆ, ಹಾಲು ಉತ್ಪಾದನೆಗಳ ಉತ್ಪಾದನೆ ಮತ್ತು ಮಾರಾಟ ಮಾಡಲು ಖರ್ಚು ಮಾಡಲಾಗುತ್ತಿದೆ.

ಇ) ಬಂದಿದೆ.

ಈ) ಒಕ್ಕೂಟದ ಪ್ರಾರಂಭದಿಂದ ಜನವರಿ 2001ರವರೆಗೆ 1913.79 ಲಕ್ಷ ಕ್ರೋಢೀಕೃತ ನಷ್ಟವನ್ನು ಹೊಂದಿರುತ್ತದೆ ಮತ್ತು ಇದುವರೆಗೆ ಕರ್ನಾಟಕ ಸರ್ಕಾರ ಹಾಗೂ ಕೇಂದ್ರ ಸರ್ಕಾರದಿಂದ ರೂ. 1045.62 ಲಕ್ಷ ಪುರಪಾವತಿಯಾಗಿದೆ.

ಸೇತುವೆಗಳ ನಿರ್ಮಾಣ

1061 (1180) ಶ್ರೀ ಹಂಪನಗೌಡ ಬಾದರ್ಲಿ (ಸಿಂಧನೂರು) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಈ ಸೇತುವೆಗಳನ್ನು ನೇರವಾಗಿ ಲೋಕೋಪಯೋಗಿ ಇಲಾಖೆಯೆ ನಿರ್ಮಿಸುತ್ತಿದೆಯೆ; ಅಥವಾ ಗುತ್ತಿಗೆದಾರರಿಗೆ ನೀಡಿದೆಯೆ; ಹಾಗಿದ್ದಲ್ಲಿ ಗುತ್ತಿಗೆ ನೀಡಲು ಅನುಸರಿಸಿದ ನೀತಿ ನಿಯಮಗಳೇನು?

ಆ) ಗುತ್ತಿಗೆದಾರರ ಮಾಹಿತಿ ನೀಡುವುದು ಮತ್ತು ನಿಗಧಿಪಡಿಸಿರುವ ಅಂದಾಜು ವೆಚ್ಚಕ್ಕಿಂತ ಗುತ್ತಿಗೆದಾರರಿಗೆ ಹೆಚ್ಚಿನ ಹಣ ನೀಡಲಾಗಿದೆಯೇ; ಹಾಗಿದ್ದಲ್ಲಿ ಎಷ್ಟೆಷ್ಟು ಹಣವನ್ನು ಸೇತುವೆಗಳ ನಿರ್ಮಾಣ ಮತ್ತು ಗುತ್ತಿಗೆದಾರರಿಗೆ ನೀಡಲಾಗಿದೆ ಎಂಬುದನ್ನು ವಿವರವಾಗಿ ತಿಳಿಸುವುದು.

ಇ) ಸೇತುವೆಗಳ ನಿರ್ಮಾಣ ಕಾರ್ಯ ಎಲ್ಲಿಯವರೆಗೆ ಆಗಿದೆ; ಎಲ್ಲಾ ಸೇತುವೆಗಳ ನಿರ್ಮಾಣ ಪೂರ್ಣವಾಗುವುದು ಯಾವಾಗ?

ಈ) ನಬಾರ್ಡ್ ಆರ್.ಐ.ಡಿ.ಎಫ್. 5 ಮತ್ತು 6ನೇ ಯೋಜನೆಯಡಿಯಲ್ಲಿ ಮಂಜೂರು ಆಗಿರುವ ಕಾಮಗಾರಿಗಳ ಸಂಖ್ಯೆ ಎಷ್ಟು?